ಕಾಪು ಕ್ಷೇತ್ರದಲ್ಲಿ ನಡೆದ ಕಳ್ಳನೋಟಿನ ಪ್ರಕರಣ.

೩೫೧. ಶ್ರೀ ವಸಂತ ಎ ಸಾಲ್ಯಾನ (ಕಾಪು).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ.

ಅ) ಕಾಪು ಕ್ಷೇತ್ರದಲ್ಲಿ ಸುಮಾರು ಆರೇಳು ತಿಂಗಳುಗಳ ಹಿಂದೆ ಒಂದು ಕಳ್ಳನೋಟು ಪ್ರಕರಣ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಅದರ ಬಗ್ಗೆ ಪೋಲೀಸ್ ಇಲಾಖೆಯವರು ಯಾವ ಕ್ರಮ ಕೈಕೊಂಡಿದ್ದಾರೆ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಹೌದು.

ಆ) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿರ್ವಾ ಪೋಲೀಸ್ ಠಾಣೆ ಅಪರಾಧ ಸಂಖ್ಯೆ ೭೭/೮೫ ಕಲಂ ೪೨೦, ೪೪ ಭಾ.ದಂ.ಸ. ಪ್ರಕಾರ ಗುನ್ನೆಯೊಂದನ್ನು ನೋಂದಾಯಿಸಿ ದಿನಾಂಕ ೩೦-೯-೮೫ರಂದು ಇದು ಜನರನ್ನು ದಸ್ತಗಿರಿ ಮಾಡಿ ಅವರಿಂದ ರೂ. ೧೦೦೦ಗಳನ್ನು ಮತ್ತು ಹಣ ದ್ವಿಗುಣಿಸುವ ಹತ್ತು ರೂಪಾಯಿನ ಬ್ಲಾಕ್ ಒಂದನ್ನು ವಶಪಡಿಸಿಕೊಳ್ಳಲಾಯಿತು. ತನಿಖೆಯ ನಂತರ ದೋಷಾರೋಪಣೆ ಪತ್ರವನ್ನು ದಿನಾಂಕ ೨೮-೮-೮೫ ರಂದು ಸಲ್ಲಿಸಲಾಯಿತು ಈಗ ಈ ಪ್ರಕರಣವು ಸೆಷನ್ಸ್ ನ್ಯಾಯಾಲಯದಲ್ಲಿದೆ.

ಹೊನ್ನಾಳ್ಳಿ ತಾಲ್ಲೂಕಿನಲ್ಲಿ ತೀರ್ಥರಾಮೇಶ್ವರ ಯಾತ್ರಾ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಬಗ್ಗೆ

೫೭೬. ಶ್ರೀ ಡಿ. ಜೆ. ಬಸವನಗೌಡ (ಹೊನ್ನಾಳಿ) —ಮಾನ್ಯ ವಾರ್ತಾ, ಯುವಜನ ಸೇವಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕು ತೀರ್ಥರಾಮೇಶ್ವರ ಯಾತ್ರಾ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಯೋಜನೆ ಸರ್ಕಾರದವರಿಗಿದೆಯೆ ?

ಆ) ಹಾಗಿದ್ದಲ್ಲಿ ಈಗಲಾದರೂ ಸರ್ಕಾರದವರು ಈ ಕ್ಷೇತ್ರದ ಬಗ್ಗೆ ಗಮನಹರಿಸುವರೆ ?

ಶ್ರೀ ಜೀವರಾಜ ಆಳ್ವ (ವಾರ್ತಾ, ಯುವಜನ ಸೇವಾ ಕ್ರೀಡೆ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು).—

ಅ) ಸದ್ಯಕ್ಕೆ ಇಲ್ಲ.

ಆ) ಉದ್ಭವಿಸುವುದಿಲ್ಲ.

ದಸರಾ ಉತ್ಸವದ ಬಗ್ಗೆ

೫೭೭. ಶ್ರೀ ಆರ್. ವೆಂಕಟರಾವಯ್ಯ (ಮುಳಬಾಗಿಲು).—ಮಾನ್ಯ ವಾರ್ತಾ, ಯುವಜನ ಸೇವಾ ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಮೈಸೂರಿನಲ್ಲಿ ಈ ವರ್ಷದ ದಸರಾ ಉತ್ಸವಕ್ಕೆ ತಗಲಿದ ಒಟ್ಟು ವಿರ್ಚಿಷ್ಟು ? ಹಾಗೂ ಇದರಲ್ಲಿ ಉತ್ಸವಕ್ಕೆ ತಗುಲಿದ ವಿರ್ಚಿಷ್ಟು ?

ಆ) ಮೇಲ್ಕಂಡ ಉತ್ಸವದಲ್ಲಿ ಪಾಲುಗೊಂಡಿದ್ದ ಎಲ್ಲಾ ತರಹದ ಸಿಬ್ಬಂದಿ ವರ್ಗದವರಿಗೆ ಕೊಡಲಾದ ಭತ್ಯೆ ಎಷ್ಟು ?

ಇ) ಇದರಲ್ಲಿ ಸರ್ಕಾರದವರಿಗೆ ಬಂದ ಲಾಭವೆಷ್ಟು ?

ಈ) ಉತ್ಸವವನ್ನು ನೋಡಲು ಎಷ್ಟು ಜನ ವಿದೇಶಿಯರು ಹಾಗೂ ಇತರರು ಬಂದಿದ್ದರು.

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಯುವಜನ ಸೇವೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಮತ್ತು ಕ್ರೀಡಾ ರಾಜ್ಯ ಸಚಿವರು).—

ಅ) ಈ ವರ್ಷ ದಸರಾ ಮಹೋತ್ಸವಕ್ಕಾಗಿ ಸರ್ಕಾರವು ೨೦.೦೦ ಲಕ್ಷ ರೂ. ಗಳನ್ನು ಮಂಜೂರು ಮಾಡಿದೆ. ಇದರಲ್ಲಿ ಉತ್ಸವಕ್ಕಾಗಿ ೨,೬೫,೦೦೦.೦೦ ರೂ. ಗಳನ್ನು ಮೆರವಣಿಗೆ ಉಪ-ಸಮಿತಿಗೆ ನೀಡಲಾಗಿದೆ. ಎಲ್ಲ ಉಪ-ಸಮಿತಿಗಳಿಂದ ಲೆಕ್ಕಪತ್ರಗಳನ್ನು ಇನ್ನೂ ಪೂರ್ಣ ಗೊಳಿಸದೇ ಇರುವ ಕಾರಣ ನಿಖರವಾದ ಖರ್ಚನ್ನು ಸದ್ಯಕ್ಕೆ ಹೇಳಲು ಬರುವುದಿಲ್ಲ

ಆ) ದಸರಾ ಮಹೋತ್ಸವಕ್ಕೆ ಸಂಬಂಧಪಟ್ಟ ಕಾರ್ಯನಿರ್ವಹಣೆಗಾಗಿ ಸರ್ಕಾರವು ತಾತ್ಕಾಲಿಕ ವಾಗಿ ಹಲವು ಹುದ್ದೆಗಳನ್ನು ಮಂಜೂರು ಮಾಡಿತ್ತು ಮತ್ತು ಈ ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು ಸರ್ಕಾರಿ ನೌಕರರಿಗೆ ಅನ್ವಯವಾಗುವ ಸಂಬಳ ಮತ್ತು ಇತರೆ ಭತ್ಯೆ ಗಳನ್ನು ಪಾವತಿ ಮಾಡಲಾಗುತ್ತದೆ. ಈ ಬಗ್ಗೆ ಸೆಪ್ಟೆಂಬರ್ ೧೯೫೫ರಿಂದ ಡಿಸೆಂಬರ್ ೧೯೫೫ರವರೆಗೆ ಒಟ್ಟು ೮೮,೭೩೬-೦೦ ರೂ. ಗಳ ವೆಚ್ಚ ತಗಲಿದೆ.

ಇ) ದಸರಾ ಮಹೋತ್ಸವವನ್ನು ಒಂದು ನಾಡಹಬ್ಬವನ್ನಾಗಿ ಆಚರಿಸಲಾಗುತ್ತದೆ ವಿನಃ ಲಾಭ ಗಳಿಕೆ ಉದ್ದೇಶದಿಂದಲ್ಲ. ಆದಾಗ್ಯೂ ಕೆಲವು ಕಾರ್ಯಕ್ರಮಗಳಿಂದ ಒಟ್ಟು ೨,೧೬,೬೮೬-೫೦ ರೂ.ಗಳ ಆದಾಯ ಬಂದಿರುತ್ತದೆ.

ಈ) ದಸರಾ ಮಹೋತ್ಸವವನ್ನು ನೋಡಲು ಬಂದ ಸುಮಾರು ೧೦ ಲಕ್ಷ ಜನರಲ್ಲಿ ಗಣನೀಯ ಸಂಖ್ಯೆಯಲ್ಲಿ ವಿದೇಶಿಯರು ಇದ್ದರು. ನಿಖರವಾಗಿ ಎಷ್ಟು ಜನ ವಿದೇಶಿಯರು ಉತ್ಸವ ಸಮಯದಲ್ಲಿ ಹಾಜರಿದ್ದರು ಎಂಬುದು ಗೊತ್ತಿಲ್ಲ.

ಕರ್ನಾಟಕದಿಂದ ಲಾಸ್ ಏಂಜಲೀಸ್‌ನಲ್ಲಿ ನಡೆದ ಒಲಂಪಿಕ್ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ಪ್ರತಿನಿಧಿಗಳ ಬಗ್ಗೆ

೮೭೧. ಶ್ರೀ ಪಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ)—ಮಾನ್ಯ ವಾರ್ತಾ, ಯುವಜನ ಸೇವಾ, ಕ್ರೀಡಾ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಿಂದ ಲಾಸ್ ಏಂಜಲೀಸ್‌ನಲ್ಲಿ ನಡೆದ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ಪ್ರತಿನಿಧಿ ಗಳ ಹೆಸರೇನು ? ಶಾಸಕರು ಹಾಗೂ ಇನ್ನಿಳಿದವರ ಹೆಸರುಗಳಿಂದಿಗೆ ವಿವರ ನೀಡುವುದು ?

ಆ) ಸರ್ಕಾರದವರು ಇವರಿಗಾಗಿ ಮಾಡಿರುವ ಖರ್ಚಿನ ಒಟ್ಟು ಮೊತ್ತವೆಷ್ಟು ?

ಇ) ಲಾಸ್ ಏಂಜಲೀಸ್‌ನಿಂದ ವಾಪಸ್ಸು ಬಂದ ಮೇಲೆ ಪ್ರತಿನಿಧಿಗಳು ಗಳಿಸಿರುವ ಅನುಭವ ದಿಂದ ಕರ್ನಾಟಕಕ್ಕೆ ಆಗಿರುವ ಲಾಭವೇನು ?

ಈ) ಕ್ರೀಡಾ ಪರಿಷತ್ತಿನ ಅಧ್ಯಕ್ಷರು ಲಾಸ್ ಏಂಜಲೀಸ್‌ಗೆ ಹೋಗದಿರುವುದಕ್ಕೆ ಕಾರಣವೇನು ?

ಉ) ಲಾಸ್ ಏಂಜಲೀಸ್‌ಗೆ ಕಳುಹಿಸಿ ಕೊಟ್ಟಿರುವ ಪ್ರತಿನಿಧಿಗಳ ಆಯ್ಕೆಯನ್ನು ಯಾವ ಅರ್ಹತೆ ಮೇಲೆ ಮಾಡಲಾಯಿತು ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಇಲಾಖೆಯ ಮಾನ್ಯ ಸಚಿವರು).—

ಅ) ೧ ಶ್ರೀ ಬಿ. ಎಸ್. ಹೊರಟ್ಟಿ, ಎಂಎಲ್‌ಸಿ

೨ ಶ್ರೀ ಎಂ. ಆರ್. ಮದನಗೋಪಾಲನಾಯಕ, ಎಂಎಲ್‌ಎ

೩ ಶ್ರೀ ಓಬಣ್ಣರಾಜು, ಎಂಎಲ್‌ಎ

೪ ಶ್ರೀ ಪಿ. ಡಿ. ಗೋವಿಂದರಾಜು, ಎಂಎಲ್‌ಎ